36

ಕರ್ನಾಟಕ ಸರ್ಕಾರ

# ತಹಶೀಲ್ದಾರರ ನ್ಯಾಯಾಲಯ ಹೂವಿನಹಡಗಲಿ

ಸಂ.ಕಂ/ಪಹಣಿ/ವಿವಾದ/11/2015-16/ ದಿನಾಂಕ: 26-05-2016

**ಉಪಸ್ಥಿತರು : ಹೆಚ್.ವಿಶ್ವನಾಥ, ತಹಶೀಲ್ದಾರರು,**

| ವಾದಿಗಳು | ಪ್ರತಿವಾದಿಗಳು / ಎದುರುದಾರರು |
|---|---|
| **ಲಂಬಾಣಿ ನಾಗ್ಯಾನಾಯ್ಕ ತಂದೆ ಧರ್ಮನಾಯ್ಕ ಕೋಮಾರ್ನಹಳ್ಳಿ ತಾಂಡ** | **ಶ್ರೀ.ಲಾಲ್ಯನಾಯ್ಕ ತಂದೆ ಚಂದ್ರನಾಯ್ಕ ಕೋಮಾರ್ನಹಳ್ಳಿ ತಾಂಡ(ನಾಗತಿಬಸಾಪುರ)** |

**ದಾವಾ ಜಮೀನಿನ ವಿವರ**

| ಗ್ರಾಮ | ಸರ್ವೇ ನಂಬರ್ | ವಿಸ್ತೀರ್ಣ (ಎಕರೆ.ಸೆಂಟ್ಸ್) |
|---|---|---|
| ನಾಗತಿ ಬಸಾಪುರ | 523/ಎ | 4-70 |

**ಪ್ರಸ್ತಾವನೆ :**

ವಾದಿಯು ಮೇಲಿನ ದಾವಾ ಜಮೀನುನನ್ನು ನೊಂದಣಿ ಕ್ರಯ ಪತ್ರ ಸಂಖ್ಯೆ 654/2015-16 ದಿನಾಂಕ 20-05-2015ರಂತೆ ಲಂಬಾಣಿ ದುರ್ಗನಾಯ್ಕ ರವರಿಂದ ಖರೀದಿ ಮಾಡಿರುತ್ತಾರೆ. ಅದರನ್ವಯ. 'ಜೆ' ನಮೂನೆ ಪ್ರಕಾರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 128ರ ರಂತೆ ಹಕ್ಕು ಬದಲಾವಣೆ ಪ್ರಕ್ರಿಯೆಗೆ ಒಳಪಡಿಸಲಾಗಿ, ನಿಗಧಿತ ಅವಧಿಯೊಳಗೆ ಗ್ರಾಮದಲ್ಲಿ ಗ್ರಾಮಲೆಕ್ಕಾಧಿಕಾರಿಗಳು ನಮೂನೆ-21ನ್ನು ಪ್ರಚುರಪಡಿಸಿದಾಗ, ದಿನಾಂಕ 19-06-2015ರಂದು ಪ್ರತಿವಾದಿಗಳಿಂದ ಲಿಖಿತ ಆಕ್ಷೇಪಣೆ ಸ್ವೀಕೃತವಾಗಿರುವುದರಿಂದ ಕಂದಾಯ ಪರಿವೀಕ್ಷಕರು ಹಡಗಲಿ ರವರು ಎಂ.ಆರ್.ನಂ: ಹೆಚ್.26/2015-16 ದಿನಾಂಕ 21-05-2015 ರಂದು ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ, ವಿಚಾರಣೆಗಾಗಿ ಈ ಕಾರ್ಯಾಲಯಕ್ಕೆ ಪ್ರಕರಣವನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ, ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 129ರ ಅನ್ವಯ ನೈಸರ್ಗಿಕ ನ್ಯಾಯ ದೃಷ್ಟಿಯಿಂದ ವಾದಿ ಮತ್ತು ಪ್ರತಿವಾದಿಗಳಿಗೆ ಕೇಳಿಕೊಳ್ಳಲು ಅವಕಾಶ ನೀಡಿ, ದಿನಾಂಕ 03-09-2015 ರಿಂದ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ದಿನಾಂಕ:15-10-2015 ರಂದು ಪ್ರತಿವಾದಿಗಳು ತಾವು ನೀಡಿದ ತಕರಾರು ಅರ್ಜಿಯನ್ನು ವಾಪಾಸ್ ಪಡೆದು, ತಾವುಗಳು ದಿನಾಂಕ 20-08-2015ರಂದು ರೂ 20.00 ರೂಗಳ ಛಾಪಾ ಕಾಗದದ ಮೇಲೆ ರಾಜಿ ಸಂದಾನ ಪತ್ರ ಬರೆದುಕೊಂಡು ವಾದಿಯ ಹೆಸರಿಗೆ ಈ ದಾವಾ ಜಮೀನು ಸೇರ ತಕ್ಕದ್ದು ಎಂದು ಅವರ ಹೆಸರಿಗೆ ಕ್ರಯ ಪತ್ರದ ಪ್ರಕಾರ ಹಕ್ಕು ಬದಲಾವಣೆ ಮಾಡಲು ಒಪ್ಪಿಗೆ ವ್ಯಕ್ತಪಡಿಸಿ, ಕೇಳಿಕೊಂಡಿರುವುದರಿಂದ ಹಾಗೂ ನೊಂದಣಿ ದಸ್ತಾವೇಜಿನ ಪ್ರಕಾರ ಹಕ್ಕು ಬದಲಾವಣೆ ಮಾಡಬೇಕಾಗಿರುವುದರಿಂದ ಈ ಕೆಳಕಂಡ ಆದೇಶ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನೆಲೆ, ಸಂದರ್ಭ, ಕಾರಣಗಳಿಂದಾಗಿ ಪ್ರತಿವಾದಿಗಳು ತಾವು ನೀಡಿದ ಆಕ್ಷೇಪಣೆಯನ್ನು ವಾಪಾಸ್ ಪಡೆದು, ಹಾಗೂ ರಾಜಿಪತ್ರದ ಮೂಲಕ ರಾಜಿಮಾಡಿಕೊಂಡಿರುವುದರಿಂದ ಮತ್ತು ವಾದಿಗಳ ಹೆಸರಿಗೆ ಕ್ರಯ ನೋಂದಣಿ ಪತ್ರದ ಸಂಖ್ಯೆ 654/15-16 ದಿನಾಂಕ: 20-05-2105 ಪ್ರಕಾರ ನಾಗತಿಬಸಾಪುರ ಗ್ರಾಮದ ಸ.ನಂ.523/ಎ ವಿಸ್ತೀರ್ಣ 4-70 ಎಕರೆ ಜಮೀನನ್ನು ವಾದಿಯಾದ ಶ್ರೀ.ಲಂಬಾಣಿ ನಾಗ್ಯನಾಯ್ಕ ತಂದೆ ಧರ್ಮನಾಯ್ಕ ರವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಬೆರಳಚ್ಚುಮಾಡಿಸಿ, ದಿನಾಂಕ 26-05-2016ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

26/5/15

ತಹಶೀಲ್ದಾರರು
ಹಡಗಲಿ.

ಪ್ರತಿಗಳನ್ನು :

1) ವಾದಿ ಮತ್ತು ಪ್ರತಿವಾದಿಗಳಿಗೆ ಹಾಗೂ ಅವರ ಪರ ನ್ಯಾಯವಾದಿಗಳಿಗೆ.
2) ಭೂಮಿ ಕೇಂದ್ರಕ್ಕೆ ಸೂಕ್ತ ಕ್ರಮಕ್ಕಾಗಿ.